**CC No.1499/2017**
**PW.1**

**<u>ಸಾಕ್ಷಿಗೆ ದಿನಾಂಕ 11.06.2024 ರಂದು ಪ್ರಮಾಣ ವಚನ ಭೋದಿಸಲಾಯಿತು</u>**

**<u>ಪಾಟೀ ಸವಾಲು:</u>** ಆರೋಪಿ ಪರ ವಕೀಲರಿಂದ

ನಾನು ಪಿ.ಯು.ಸಿ. ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ ಹಾಗೂ ಇಂಗ್ಲೀಷ್ ಓದಲು ಮಾತ್ರ ಬರುತ್ತದೆ. ಆರೋಪಿ ನನಗೆ ದೂರದ ಸಂಬಂಧಿ. ನಮ್ಮ ಅಜ್ಜಿಯ ಕಡೆಯಿಂದ ಸಂಬಂಧಿಕರಾಗಬೇಕು. ನನ್ನ ಅಜ್ಜಿ ಹಾಗೂ ಆರೋಪಿಯ ಅಜ್ಜಿ ಅಕ್ಕ ತಂಗಿಯಾಗಿರುತ್ತಾರೆ. ಆರೋಪಿಯವರ ಮಾವ ನನಗೆ ಪರಿಚಯಸ್ಥರು. ವೆಂಕಟೇಶಯ್ಯ ಹಾಗೂ ಆರೋಪಿಯವರು ಸಂಬಂಧಿಕರು ಆದರೆ ಯಾವ ರೀತಿಯ ಸಂಬಂಧವೆಂದು ಹೇಳಲಾಗುವುದಿಲ್ಲ. ವೆಂಕಟೇಶಯ್ಯರವರು ಆರೋಪಿಯ ತಾಯಿಯವರ ಅಣ್ಣ ಎಂದರೆ ಸರಿ. ರಾಜಣ್ಣರವರ ಮಗ ಆರ್. ಶ್ರೀನಿವಾಸ್ ಮೂರ್ತಿರವರು ನನಗೆ ಪರಿಚಯವಿರುವುದಿಲ್ಲ. ನನ್ನ ಹೆಂಡತಿಯ ತಂದೆಯ ಹೆಸರು ರಾಮಯ್ಯ. ನನ್ನ ಹೆಂಡತಿಯ ತಂದೆ ಹಾಗೂ ಆರ್. ಶ್ರೀನಿವಾಸ್ ಮೂರ್ತಿರವರು ಅಣ್ಣತಮ್ಮಂದಿರು ಎಂದರೆ ಇರಬಹುದು ಎಂದು ನುಡಿಯುತ್ತಾರೆ.

ಆರ್. ಶ್ರೀನಿವಾಸ್ ಮೂರ್ತಿರವರು ಆರೋಪಿಯ ವಿರುದ್ಧ ಸಿ.ಸಿ 606/2013 ಎಂಬ ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದರೆ ನನಗೂ ಅದಕ್ಕೂ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ. ಸದರಿ ಪ್ರಕರಣದಲ್ಲಿ ಆರ್. ಶ್ರೀನಿವಾಸ್ ಮೂರ್ತಿರವರ ಪರವಾಗಿ ಸಾಕ್ಷಿಯಾಗಿ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಇರಬಹುದು ಎಂದು ನುಡಿಯುತ್ತಾರೆ. ಯಾವ ಕಾರಣಕ್ಕೆ ಸಾಕ್ಷಿಯಾಗಿ ಹೇಳಿಕೆ ಕೊಟ್ಟಿರುತ್ತೇನೆ ಎಂದು ನೆನಪಿರುವುದಿಲ್ಲ. ಆರೋಪಿರವರ ಹೆಂಡತಿ ಅವರ ಜೊತೆ ವಾಸಿಸುತ್ತಿರುವುದಿಲ್ಲ. ಆರೋಪಿರವರ ಹೆಂಡತಿ ಆರೋಪಿಯ ವಿರುದ್ಧ ಪ್ರಕರಣವನ್ನು ಹೂಡಿರಬಹುದು ಎಂದು ನುಡಿಯುತ್ತಾರೆ. ಆರೋಪಿಯ ಹೆಂಡತಿ ಆರೋಪಿಯ ವಿರುದ್ಧ ವಿಚ್ಛೇದನ ಕೋರಿ ಅರ್ಜಿ ಸಲ್ಲಿಸಿದ್ದು, ನಾನು ಮತ್ತು ಆರ್. ಶ್ರೀನಿವಾಸ್ ಮೂರ್ತಿರವರು ಸಂದಾಯ ಮಾಡಿಸಿರುತ್ತೇವೆ ಎಂದರೆ ಸರಿಯಲ್ಲ. ನಾವು ರಾಜೀ ಮಾಡಿಸಿದ ಕಾರಣದಿಂದ ಸಿ.ಸಿ ನಂ. 606/2013 ರಲ್ಲಿ ಆರ್. ಶ್ರೀನಿವಾಸ್ ಮೂರ್ತಿರವರ ಪರವಾಗಿ ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಸಿ.ಸಿ. ನಂ. 606/2013 ರಲ್ಲಿ ರಾಜೀ ಆಗುವ ಸಮಯದಲ್ಲಿ ಆರೋಪಿಯ ಪರವಾಗಿ ನಾನೇ ವಕೀಲರನ್ನು ನೇಮಿಸಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

2016ರ ಮೇ ಕೊನೇಯ ವಾರದಲ್ಲಿ ಆರೋಪಿಗೆ ಹಣವನ್ನು ನೀಡಿರುತ್ತೇನೆ. ಸದರಿ ವಿಚಾರವನ್ನು ನನ್ನ ದೂರಿನಲ್ಲಿ ಹೇಳಿರುತ್ತೇನೋ ಇಲ್ಲವೋ ಎಂಬುದು ನನಗೆ ನೆನಪಿಲ್ಲ. ನಾನು ಅರೆ ಸರ್ಕಾರಿ ನೌಕರನಾಗಿ ಕೆಲಸ ಮಾಡುತ್ತೇನೆ. ಸದರಿ ವಿಚಾರವನ್ನು ನನ್ನ ದೂರಿನಲ್ಲಿ ಬರೆಸಿರುವುದಿಲ್ಲ. ಸದರಿ ವಿಚಾರಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನನ್ನ ಮಾಸಿಕ ವೇತನ 2016-17ರ ಸಮಯದಲ್ಲಿ ಸುಮಾರು ರೂ. 8,000/- ಆಗಿತ್ತು. ಸದರಿ ವೇತನವಲ್ಲದೇ ಬೇರೆ ಮೂಲಗಳಿಂದಲೂ ಸಹ ನನ್ನ ಸಂಸಾರ ನಡೆಯುತ್ತಿತ್ತು. ನನಗೆ ಜಮೀನು ಇದ್ದು, ಅದರಿಂದ ಆದಾಯ ಬರುತ್ತದೆ. ನಮ್ಮ ತಂದೆಯವರಿಗೆ 4 ಎಕರೆ 17 ಗುಂಟೆ ಜಮೀನು ಇದ್ದು ಅದರಲ್ಲಿ ವ್ಯವಸಾಯ ಮಾಡುತ್ತೇನೆ. ನನ್ನ ತಂದೆಗೆ ಒಟ್ಟು 4 ಜನ ಮಕ್ಕಳು. ನಾವು ಬೇರೆ ಬೇರೆಯಾಗಿ ವಾಸಿಸುತ್ತಿರುತ್ತೇವೆ. ನಮ್ಮ ತಂದೆಯವರ ಆಸ್ತಿ ನಮ್ಮ 4 ಜನಕ್ಕೂ ಸೇರಿದ್ದಾಗಿರುತ್ತದೆ.

2016ನೇ ಇಸವಿಯಲ್ಲಿ 4 ಎಕರೆ 17 ಗುಂಟೆಯಲ್ಲಿ ನೀಲಗಿರಿ ಬೆಳೆ ಇತ್ತು. ಮಳೆಯ ಆಧಾರದ ಮೇಲೆ ಬೆಳೆಯನ್ನು ಕಟಾವು ಮಾಡಿಸುತ್ತಿದ್ದೆವು. ನಾವು ಕಟಾವು ಮಾಡಿದ ಸಮಯದಲ್ಲಿ ಸುಮಾರು ರೂ. 10 ರಿಂದ 12 ಲಕ್ಷ ಹಣ ಆದಾಯ ಬರುಬಹುದು ಎಂದು ನುಡಿಯುತ್ತಾರೆ. 4 ಎಕರೆ 17 ಗುಂಟೆ ಜಮೀನಿನಲ್ಲಿ ನೀಲಗಿರಿಯಿಂದ ಸುಮಾರು ರೂ. 3 ರಿಂದ 4 ಲಕ್ಷ ಆದಾಯ ಮಾತ್ರ ಬರುತ್ತದೆ ಎಂದರೆ ಸರಿಯಲ್ಲ. ಕೃಷಿಯಿಂದ ಬಂದ ಆದಾಯವನ್ನು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. 4 ಎಕರೆ 17 ಗುಂಟೆ ಜಮೀನಿನಲ್ಲಿ ಬರುವ ಆದಾಯವನ್ನು ನಾಲ್ಕೂ ಜನರು ಬಳಸಿಕೊಳ್ಳಬೇಕಾಗುತ್ತದೆ ಎಂದರೆ ಸಾಕ್ಷಿಯು ನಾನು ನನ್ನ ಪಾಲಿಗೆ ಬಂದ ಹಣವನ್ನು ನಾನು ನನ್ನ ಬಳಿ ಇಟ್ಟುಕೊಂಡಿರುತ್ತೇನೆ. ಕೃಷಿಯಿಂದ ಬಂದ ಆದಾಯಕ್ಕೆ ಸಂಬಂಧಿಸಿದಂತೆ ಬ್ಯಾಂಕ್ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ರೀತಿಯ ತೊಂದರೆ ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಆದಾಯ ತೆರಿಗೆಯ ಪಾವತಿದಾರನಾಗಿರುವುದಿಲ್ಲ. ನನ್ನ ವಾರ್ಷಿಕ ಆದಾಯ ರೂ. 5 ಲಕ್ಷ ಇರುವುದಿಲ್ಲ ಆ ಕಾರಣದಿಂದ ನಾನು ಆದಾಯ ತೆರಿಗೆಯನ್ನು ಪಾವತಿ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ರೂ. 4 ಲಕ್ಷದಷ್ಟು ಹಣವನ್ನು ಕೊಡುವ ಸಾಮರ್ಥ್ಯ ನನಗೆ ಇರುತ್ತದೆ.

ಆರೋಪಿಗೆ ನಾನು ಹಣವನ್ನು ನಗದು ರೂಪದಲ್ಲಿ ನೀಡಿರುತ್ತೇನೆ. ಸದರಿ ಹಣವನ್ನು ನಾನು ನೀಲಗಿರಿ ಕೃಷಿಯಿಂದ ಹಾಗೂ ಇತರೆ ಮೂಲಗಳಿಂದ ಬಂದ ಹಣದಿಂದ ಸಾಲವನ್ನು ನೀಡಿರುತ್ತೇನೆ. ನಗದಾಗಿ ನೀಡಿರುವ ವಿಷಯವನ್ನು ನನ್ನ ದೂರಿನಲ್ಲಿ ಹೇಳಿರುತ್ತೇನೆ. ಆರೋಪಿಯು ಪೋಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿರುತ್ತಾರೆ. ಆರೋಪಿಗೆ ಎಷ್ಟು ಸಂಬಳವಿರುತ್ತದೆಂದು ಹೇಳಲಾಗುವುದಿಲ್ಲ. ಆರೋಪಿಗೆ 2016 ರಲ್ಲಿ ತಿಂಗಳಿಗೆ ರೂ. 40 ರಿಂದ 45 ಸಾವಿರ ಸಂಬಳವಿತ್ತೆಂದರೆ ಗೊತ್ತಿಲ್ಲ. ಆರೋಪಿಗೆ 2016 ರಲ್ಲಿ ಸಾಕಷ್ಟು ಆದಾಯವಿದ್ದ ಕಾರಣದಿಂದ ಅವರಿಗೆ ಸಾಲ ಮಾಡುವ ಪ್ರಮೇಯವಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಅವರ ಆದಾಯವನ್ನು ಮೂಲವಾಗಿಟ್ಟುಕೊಂಡು ಬ್ಯಾಂಕಿನಿಂದ ಸಾಲ ಪಡೆದುಕೊಳ್ಳಬಹುದಾಗಿತ್ತು ಎಂದರೆ ನನಗೂ ಅದಕ್ಕೂ ಸಂಬಂಧವಿಲ್ಲ ಎಂದು ನುಡಿಯುತ್ತಾರೆ. ಆರೋಪಿಯು ಹಣದ ಅವಶ್ಯಕತೆ ಇದೆ ಎಂದು ಕೇಳಿಕೊಂಡ ಕಾರಣ ಅವರಿಗೆ ರೂ. 4 ಲಕ್ಷ ಹಣವನ್ನು ಸಾಲವಾಗಿ ನೀಡಿರುತ್ತೇನೆ.

ಆರೋಪಿ ಹಾಗೂ ಅವರ ಹೆಂಡತಿಯ ಮಧ್ಯೆ ವಿಚ್ಛೇದನ ದಾವೆಯು 2013 ನೇ ಇಸವಿಯಲ್ಲಿಯೇ ಮುಗಿದಿದ್ದು, ಆರೋಪಿಯು ಅವರ ಹೆಂಡತಿಗೆ ಕೊಡಬೇಕಾದ ಎಲ್ಲಾ ಮೊತ್ತವನ್ನು 2016 ನೇ ಇಸವಿಯಲ್ಲಿಯೇ ನೀಡಿರುತ್ತಾರೆ, ಆ ಕಾರಣದಿಂದ ಆರೋಪಿಗೆ ಯಾವುದೇ ರೀತಿಯ ಹಣದ ಅವಶ್ಯಕತೆ ಇರುವುದಿಲ್ಲ ಎಂದರೆ ನನಗೂ ಅದಕ್ಕೂ ಸಂಬಂಧವಿರುವುದಿಲ್ಲ ಮತ್ತು ನನಗೆ ಅದರ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಗೆ ಸಾಲವಾಗಿ ನೀಡಿದ ರೂ.4 ಲಕ್ಷ ಹಣವನ್ನು 3 ತಿಂಗಳ ನಂತರ ಮರಳಿ ನೀಡುವಂತೆ ಕೇಳಿರುತ್ತೇನೆ. ಸಾಕ್ಷಿಗೆ ನಿಪಿ-1 ನ್ನು ತೋರಿಸಲಾಗಿ ಸಾಕ್ಷಿಯು ನಿಪಿ-1 ಚೆಕ್‌ನ್ನು ನೋಡಿ ಗುರುತಿಸಿ ಅದನ್ನು ಆರೋಪಿಯೇ ನನಗೆ ನೀಡಿದ್ದು, ಅದರಲ್ಲಿರುವ ಸಹಿಯನ್ನು ಹೊರತುಪಡಿಸಿ ಬೇರೆಯ ವಿಷಯವನ್ನು ನಾನು ನನ್ನ ಸ್ನೇಹಿತರಿಂದ ಬರೆಸಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ದೂರಿನಲ್ಲಿ ಆರೋಪಿ ನನಗೆ ಖಾಲಿ ಚೆಕ್‌ನ್ನು ನೀಡಿದ್ದರು ಎಂದು ನನ್ನ ಪಿರ್ಯಾದಿಯಲ್ಲಿ ಬರೆಸಿರುತ್ತೇನೆ. ಹಾಗೆ ನಾನು ಪಿರ್ಯಾದಿಯಲ್ಲಿ ಬರೆಸದಿದ್ದರೂ ನ್ಯಾಯಾಲಯದ ಮುಂದೆ ಸುಳ್ಳು ನುಡಿಯುತ್ತಿದ್ದೇನೆ ಎಂರದೆ ಸರಿಯಲ್ಲ.

ದಿಃ 01.08.2016 ರಂದು ಸದರಿ ಚೆಕ್‌ನ್ನು ನನ್ನ ಸ್ನೇಹಿತರಿಂದ ಬರೆಸಿರುತ್ತೇನೆ ಎಂದರೆ ಸರಿ. 2016 ರ ಜುಲೈ ತಿಂಗಳಿನಲ್ಲಿ ಚೆಕ್‌ನ್ನು ಬ್ಯಾಂಕಿಗೆ ನೀಡಿರುತ್ತೇನೆ. ನಿಪಿ-1 ಆರೋಪಿಯ ಸಹಿ ಸರಿ ಇಲ್ಲ ಎಂದು ಹಿಂದಿರುಗಿರುತ್ತದೆ. ನಿಪಿ-1 ರಲ್ಲಿರುವ ಸಹಿ ಆರೋಪಿಯದಲ್ಲ ನೀವೇ ಆ ಸಹಿಯನ್ನು ಹಾಕಿ ಬ್ಯಾಂಕಿಗೆ ನೀಡಿರುತ್ತೀರಾ ಎಂದರೆ ಸರಿಯಲ್ಲ.

<u>ಮುಂದುವರೆದ ಪಾಟೀಸವಾಲುಃ</u> ಆರೋಪಿ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.
(ನನ್ನ ಉಕ್ತಲೇಖನ ರೀತ್ಯಾತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ,**
**ದೊಡ್ಡಬಳ್ಳಾಪುರ .**